Rotary

# JASMINE

ಜಾಸ್ಮಿನ್ | जास्मिन


UNITE FOR GOOD

WEEKLY BULLETIN OF ROTARY CLUB KUNDAPURA SOUTH

Charter No. 23496 Zone 1, R. I. Dist. 3182 Charter Date : 04-03-1986




40$^{h}$ year of Service and Fellowship



Rtn. Francesco Arezzo
RI President




Rtn. Palaksha K.
Dist. Governor




Rtn. PHF. I. Narayana
Asst. Governor



Rtn. Koushik Yadiyal
Zonal Lieutenant



Rtn. Sachin Nackathaya
President



Rtn. Gerald Crasto
Secretary



Rtn. Ramananda Karanth
Bulletin Editor

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

Volume 40 Issue - 10 11th September 2025

## " Quality Medicine at Affordable Price" Main Objective of Pradhana Mantri Jan Aushadhi Kendra

Chief Guest :
Rtn. S. Jayakar Shetty,
Chairman,
Indian Red Cross Society Kundapur

Time : 7.00 p.m.
Venue : Hotel Shivaprasad Grand, Kundapura

## ಸಂಪಾದಕೀಯ :



ನನ್ನೊಲವಿನ ರೋಟರಿ ಮಿತ್ರರೇ,

ನಮ್ಮ ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ವತಿಯಿಂದ ಮೊನ್ನೆ ನಡೆದ ವಾರದ ಸಭೆಯಲ್ಲಿ ಶಿಕ್ಷಕರ ದಿನಾಚರಣೆ ಪ್ರಯುಕ್ತ ನಮ್ಮ ಇನ್ನರ್ ವೀಲ್ ಕ್ಲಬ್ ನಿಂದ ನಡೆಸಲ್ಪಡುತ್ತಿರುವ ಚೈತನ್ಯ ಬುದ್ಧಿಮಾಂಧ್ಯ ಮಕ್ಕಳ ಶಾಲೆಯ ಟೀಚರ್ ಶ್ರೀಮತಿ ಲೀಲಾವತಿ ಕರ್ಕಡ ಅವರನ್ನು ಸನ್ಮಾನಿಸಿದೆವು. ನಿಜವಾಗಲೂ ಅದೊಂದು ಅರ್ಥಪೂರ್ಣ ಕಾರ್ಯಕ್ರಮ. ಬುದ್ಧಿ ಮಾಂದ್ಯ ವಿಶೇಷ ಮಕ್ಕಳನ್ನು ತಕ್ಕ ಮಟ್ಟಿಗೆ ಕಲಿಸುವುದೇ ಒಂದು ಗೌರಿ ಶಂಕರ ಶಿಖರ ಏರಿದಂತೆ. ಒಂದೊಂದು ಮಕ್ಕಳು ಒಂದೊಂದು ತರಹ ತಮ್ಮ ಬಿಹೇವಿಯರ್ ತೋರಿಸುತ್ತವೆ. ಆದರೆ ಎಲ್ಲೂ ತಮ್ಮ ತಾಳ್ಮೆ ಕಳೆದುಕೊಳ್ಳದೆ ಪ್ರೀತಿ ಮಮತೆಯಿಂದ ತಮ್ಮ ಮನೆಯ ಮಕ್ಕಳಂತೆ ನೋಡುತ್ತಾರಲ್ಲ ಅದಕ್ಕೆ ನಿಜವಾಗಲೂ ಒಂದು ರಾಜ್ಯ ಪ್ರಶಸ್ತಿಯೇ ಕೊಡಬೇಕು. ಆ ಮಕ್ಕಳಿಗೆ ಆಗಾಗ ವೈದ್ಯಕೀಯ ಚಿಕಿತ್ಸೆಗಾಗಿ ವೈದ್ಯರಲ್ಲಿ ಕರೆದುಕೊಂಡು ಹೋಗುವುದು, ಆ ಮಕ್ಕಳಿಂದ ತರಹ ತರಹದ ಚಟುವಟಿಕೆಗಳನ್ನು ಮಾಡಿಸುವುದು ಉದಾ: ನಮ್ಮ ಕ್ಲಬ್ಬಿನಲ್ಲಿ ಅತಿಥಿಗಳಿಗೆ ಗೌರವಿಸುವುದು ಆ ಮಕ್ಕಳು ತಯಾರಿಸಿದ ಪ್ಲಾಸ್ಟಿಕ್ ಹೂವು. ಅಂತೆಯೇ ಊಟವನ್ನು ಅಚ್ಚುಕಟ್ಟಾಗಿ ಮಾಡುವುದು ಹೇಗೆ? ಸ್ವಚ್ಚತೆಯಿಂದ ಇರುವುದು ಹೇಗೆ?, ಹಾಡುಗಳನ್ನು ಕಲಿಸುವುದು ಇತ್ಯಾದಿ.  ಈ ಟೀಚರ್‌ನಿಂದ ತರಬೇತು ಪಡೆದ ಒಬ್ಬ 17 ವರುಷದ ವಿಶೇಷ ಹುಡುಗನನ್ನು ಆವಾಗ ಆವಾಗ ಭೇಟಿ ಮಾಡುವ ಅವಕಾಶ ನನಗೆ ಆಗುತ್ತಲೇ ಇರುತ್ತದೆ. ಆ ಹುಡುಗನಲ್ಲಿ ಈ ಲೀಲಾವತಿ ಟೀಚರ್ ಎಷ್ಟು ಶಿಸ್ತು ಬೆಳೆಸಿದ್ದಾರೆ ಎಂದರೆ ಆ ಹುಡುಗ ಶಾಲೆಯಿಂದ ಮನೆಗೆ ಮರಳಿದ ಕೂಡಲೆ ತನಗೆ ಸ್ನಾನ ಆಗ ಬೇಕೆಂದು ಹಠ ಹಿಡಿದು ಮಾಡುತ್ತಾನೆ. ಸದಾ ಶುಭ್ರ ಬಟ್ಟೆ ಧರಿಸಬೇಕೆಂದು ಬಯಸುತ್ತಾನೆ. ತರಹ ತರಹದ ಪ್ರಾರ್ಥನೆಗಳನ್ನು ಮಾಡುತ್ತಾನೆ. ಎಲೆಕ್ಟ್ರಾನಿಕ್ ಡಿವೈಸ್ ಯಾವ ರೀತಿ ಆಪರೇಟ್ ಮಾಡಬೇಕು ಹೊಸತಾಗಿ ಯಾರಾದರೂ ಎದುರು ಸಿಕ್ಕಿದರೆ ಅವರಿಗೆ ನಮಸ್ಕಾರ ಕೊಡುವುದು ತನ್ನ ಕೆಲಸ ತಾನು ಮಾಡುವುದನ್ನು ಮಾಡಿ ತಂದೆ ತಾಯಿಗೆ ಹೆಚ್ಚಿಗೆ ಹೊರೆಯಾಗದಂತೆ ಅವನನ್ನು ಈ ಚೈತನ್ಯ ಬುದ್ಧಿ ಮಾಂದ್ಯ ಮಕ್ಕಳ ಶಾಲೆ ತಯಾರು ಮಾಡಿದೆ ನಿಜವಾಗಲೂ ಇದು ದೇವರಿಗೆ ಸಲ್ಲಿಸಿದ ಸೇವೆ ಈ ಶಾಲೆಗೆ ಸಂಬಂದಿಸಿದ ಸರ್ವ ಸದಸ್ಯರಿಗೆ ಮನದಾಳದ ಅಭಿನಂದನೆ ಹಾಗೂ ಕೃತಜ್ಞತೆ ಅರ್ಪಿಸುತ್ತಿದ್ದೇನೆ. ನಮ್ಮ ರೋಟರಿ ಸಂಸ್ಥೆ ಕಳೆದ 20 ವರುಷ ಗಳಿಂದ ಈ ಶಾಲೆಯನ್ನು ಪೋಷಿಸಿಕೊಂಡು ಬಂದಿರುವುದು ನಿಜಕ್ಕೂ ಪ್ರಶಂಸನೀಯ ಈ ಪುಣ್ಯ ಕಾರ್ಯ ನಿತ್ಯ ಮುಂದುವರಿಯಲಿ ಎಂದು ಹಾರೈಸುತ್ತೇನೆ.

**– ರೊ. ರಮಾನಂದ ಕಾರಂತ್**

## ವಾರದ ಸಭೆಯ ವರದಿ




ಕಳೆದ ತಾ।04/09/2025 ರಂದು ನಡೆದ ನಮ್ಮ ಕ್ಲಬ್ಬಿನ ವಾರದ ಸಭೆ ಶಿಕ್ಷಕರ ದಿನಾಚರಣೆ ಪ್ರಯುಕ್ತ ಇನ್ನರ್‌ವೀಲ್ ಕ್ಲಬ್ ಕುಂದಾಪುರ ದಕ್ಷಿಣದೊಂದಿಗೆ ನಡೆದ ಜಂಟಿ ಸಭೆಯಾಗಿತ್ತು. ಮುಖ್ಯ ಅತಿಥಿಗಳಾಗಿ ರೊ. ಮಂಜುನಾಥ್ ಕೆ.ಎಸ್. ನಿವೃತ್ತ ಶಿಕ್ಷಕರು ಉಪಸ್ಥಿತರಿದ್ದರು. ವರ್ತಮಾನ ಕಾಲದಲ್ಲಿ ಪ್ರಸಕ್ತ ಶಿಕ್ಷಣ ಪದ್ಧತಿಯ ಬಗ್ಗೆ ಮುಖ್ಯ ಅತಿಥಿಗಳು ಮಾತನಾಡುತ್ತಾ ಸರಕಾರದ ಕೊಡುಗೆ ಹಾಗೂ ಶಿಕ್ಷಕರ ಕೊರತೆ ಇಂದಿನ ಶಿಕ್ಷಣದ ಗುಣಮಟ್ಟ ಮುಂತಾದ ವಿಚಾರಗಳಲ್ಲಿ ಸವಿಸ್ತಾರವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀಯುತ ಮಂಜುನಾಥ್ ಕೆ.ಎಸ್. ಅವರನ್ನು ಹಾಗೂ ಚೈತನ್ಯ ಬುದ್ಧಿ ಮಾಂದ್ಯ ಮಕ್ಕಳ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಲೀಲಾವತಿ ಕರ್ಕಡ ಇವರುಗಳ ಶಿಕ್ಷಣ ಕ್ಷೇತ್ರದಲ್ಲಿ ನೀಡಿದ ಸೇವೆಯನ್ನು ಪರಿಗಣಿಸಿ ಸನ್ಮಾನಿಸಲಾಯಿತು. ಶ್ರೀಯುತ ಮಂಜುನಾಥ್ ಕೆ.ಎಸ್. ಅವರ ಸನ್ಮಾನ ಪತ್ರವನ್ನು ರೊ. ರೇಗನ್ ಲೋಬೊ ವಾಚಿಸಿದರು ಹಾಗೂ ಶ್ರೀಮತಿ ಲೀಲಾವತಿ ಕರ್ಕಡ ಅವರ ಸನ್ಮಾನಪತ್ರವನ್ನು ಇನ್ನರ್ ವೀಲ್ ಕ್ಲಬ್ಬಿನ ಅಧ್ಯಕ್ಷರಾದ ಆ್ಯನ್ ಸುಜಾತ ನಕ್ಕತ್ತಾಯ ವಾಚಿಸಿದರು. ಸಂಸ್ಥೆಯ ಸರ್ವ ಹಿರಿಯ ಸದಸ್ಯರುಗಳು ಇನ್ನರ್‌ವೀಲ್ ಸದಸ್ಯರುಗಳು ವೇದಿಕೆಯಲ್ಲಿ ಈರ್ವರನ್ನು ಸನ್ಮಾನಿಸಿ ಗೌರವಿಸಿದರು. ಆಗಮಿಸಿದ ಸರ್ವರನ್ನು ರೊ. ಸಚಿನ್ ನಕ್ಕತ್ತಾಯ ಸ್ವಾಗತಿಸಿದರು. ರೊ. ಜೆರಾಲ್ಡ್ ಕ್ರಾಸ್ತಾ ವಾರದ ವರದಿ ವಾಚಿಸಿದರು. ಇನ್ನರ್‌ವೀಲ್ ಸದಸ್ಯೆ ರೊ. ಆ್ಯನ್ ಜ್ಯೋತಿ ಕ್ರಾಸ್ತಾ ಪ್ರಾರ್ಥನೆಯನ್ನು ನೆರವೇರಿಸಿದರು. ರೊ. ಮನೋಹರ್ ಭಟ್ ವಾರದ ಚಿಂತನೆ ಮಂಡಿಸಿದರು. ರೊ. ಕೆ.ಕೆ. ಕಾಂಚನ್ ರೋಟರಿ ಮಾಹಿತಿ ತಿಳಿಸಿದರು. ಕಾರ್ಯಕ್ರಮದಲ್ಲಿ ನಮ್ಮವರೇ ಆದ ರೊ. ದೋಮಾ ಚಂದ್ರಶೇಖರ್ ನಿವೃತ್ತ ಪ್ರಾಚಾರ್ಯ ಇವರನ್ನು ಶಿಕ್ಷಕರ ದಿನಾಚರಣೆಯ ಅಂಗವಾಗಿ ಗುರುತಿಸಿ ಗೌರವಿಸಲಾಯಿತು. ನಮ್ಮ ರೋಟರಿಯ ಮಾಜಿ ಅಧ್ಯಕ್ಷ ರೊ. ಜಾನ್ಸನ್ ಆಲ್ಮೇಡಾ ಅವರ ಸಹಕಾರಿ ಕ್ಷೇತ್ರದಲ್ಲಿ ರೋಸರಿ ಕ್ರೆಡಿಟ್ ಕೋಪರೇಟಿವ್ ಅಧ್ಯಕ್ಷರಾಗಿ 15 ವರುಷಗಳಿಂದ ನಡೆಸಿದ ಸೇವೆ ಹಾಗೂ ಸಾಧನೆಯನ್ನು ಗುರುತಿಸಿ ಸನ್ಮಾನಿಸಿ ಗೌರವಿಸಲಾಯಿತು. ರೊ. ರಮಾನಂದ ಕಾರಂತ್, ರೊ. ಜಾನ್ಸನ್ ಆಲ್ಮೇಡರ ಸಾಧನೆಯ ಪರಿಚಯ ಮಾಡಿಸಿಕೊಟ್ಟರು. ಕಾರ್ಯಕ್ರಮದಲ್ಲಿ ರೊ. ಮಹೇಂದ್ರ ಶೆಟ್ಟಿ ತಮ್ಮ ಹಾಸ್ಯ ಚಟಾಕಿಯಿಂದ ಎಲ್ಲರನ್ನೂ ನಗಿಸಿದರು ಹಾಗೂ ಇನ್ನರ್‌ವೀಲ್ ಸದಸ್ಯೆ ಆ್ಯನ್. ಶಾಂತಾ ಕಾಂಚನ್ ಅವರ ಧನ್ಯವಾದಗಳೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.





## ಹುಟ್ಟುಹಬ್ಬದ ಶುಭಾಶಯಗಳು



**ರೊ. ರಮೇಶ್ ಕೆ.**
**ದಿನಾಂಕ : ಸೆಪ್ಟೆಂಬರ್ 18**
**ಮೊಬೈಲ್ : 9743577541**

"Happiness is not something ready-made. It comes from your own actions."

**— Dalai Lama**

## ರೋಟರಿ ಕ್ಲಬ್ ಕುಂದಾಪುರ ದಕ್ಷಿಣದಿಂದ ವಿದ್ಯಾರ್ಥಿಗಳಿಗೆ ರೂ. 60,000/– ಮೊತ್ತದ ವಿದ್ಯಾರ್ಥಿವೇತನ ವಿತರಣೆ




ಬಡ ಮತ್ತು ಅರ್ಹ ವಿದ್ಯಾರ್ಥಿಗಳಿಗೆ ನೆರವಾಗುವ ಉದ್ದೇಶದಿಂದ, ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ವತಿಯಿಂದ ಕುಂದಾಪುರದ ಬಿ.ಬಿ.ಹೆಗ್ಡೆ ಕಾಲೇಜಿನಲ್ಲಿ ವಿದ್ಯಾರ್ಥಿವೇತನ ವಿತರಣಾ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಯುವ ಮನಸ್ಸುಗಳನ್ನು ಶಿಕ್ಷಣದ ಮೂಲಕ ಸಬಲೀಕರಣಗೊಳಿಸಬೇಕೆಂಬ ತಮ್ಮ ತಂದೆ ದಿ. ದಿನೇಶ್ ಕಾಮತ್ ಅವರ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ, ಶ್ರೀಮತಿ ಸುಪ್ರಿಯಾ ಬ್ಯಾನರ್ಜಿ ಅವರು ಅವರ ಸ್ಮರಣಾರ್ಥವಾಗಿ ರೂ. 60,000/– ಮೊತ್ತದ ವಿದ್ಯಾರ್ಥಿವೇತನವನ್ನು ಪ್ರಾಯೋಜಿಸಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ಅಧ್ಯಕ್ಷರಾದ ಸಚಿನ್ ನಕ್ಕತಾಯ ಅವರು ಶಿಕ್ಷಣದ ಮಹತ್ವ ಮತ್ತು ಸಮಾಜಕ್ಕೆ ಏನಾದರೂ ಕೊಡುಗೆ ನೀಡುವ ಅಗತ್ಯದ ಬಗ್ಗೆ ತಿಳಿಸಿದರು. ಗೌರವ ಅತಿಥಿಯಾಗಿ ಆಗಮಿಸಿದ್ದ ರೊ. ರಮಾನಂದ ಕಾರಂತ್ ಅವರು ದಿವಂಗತ ದಿನೇಶ್ ಕಾಮತ್ ಅವರ ಸಾಧನೆಗಳು ಮತ್ತು ದಾನ ಮನೋಭಾವದ ಬಗ್ಗೆ ಮಾಹಿತಿ ನೀಡಿದರು. ಕಾಲೇಜಿನ ಪ್ರಾಂಶುಪಾಲರಾದ ಉಮೇಶ್ ಶೆಟ್ಟಿ ಅವರು, ಬಡ ವಿದ್ಯಾರ್ಥಿಗಳಿಗೆ ನೆರವು ನೀಡಲು ಕಾಲೇಜು ಹೇಗೆ ದಾನಿಗಳನ್ನು ಸಂಪರ್ಕಿಸಿದೆ ಎಂಬುದರ ಬಗ್ಗೆ ವಿವರಿಸಿದರು. ಉಪ ಪ್ರಾಂಶುಪಾಲರಾದ ಚೇತನ್ ಅವರು ಕಾರ್ಯಕ್ರಮವನ್ನು ಸುಂದರವಾಗಿ ನಿರೂಪಿಸಿದರು.





Free sugar and bp check up camp in association with Indian Redcross Society, Kundapura

## Rotary Information

**Congratulations You Rotarians !!!!**


The Rotary Foundation achieved two historic milestones in 2024–25:

1. Our fundraising goal for 2024-25: $500 million. Achievement: $569 million!
2. Our Endowment goal by 2025: $2.025 billion. Achievement: $2.050 billion!"



Rtn. Dr. S. N. Padiyar
1985-86 & 1986-87


Rtn. B. Arun Kumar Shetty
1987-88


Rtn. Dr. H. Rammohan
1988-89


Rtn. K. Shridhar Kamath
1989-90


Rtn. Dr. Anand Nayak
1990-91


Rtn. B. Ramachandra Prabhu
1991-92


Rtn. G. Santhosh Kumar Shetty
1992-93


Rtn. Dr. H. A. Vishweshwar
1993-94


Rtn. Dr. H. R. Hebbar
1994-95



Rtn. K. T. Surendranath
1995-96


Rtn. B. C. Somayaji
1997-98


Rtn. S. Subraya Halambi
1999-2000


Rtn. K. Seetharama Nackathaya
2001-02


Rtn. Dr. Umesh Puthran
2003-04


Rtn. A. Shantharam Pai
2005-06

# ರೋಟರಿ ಕ್ಲಬ್‌ಗಳಿಂದ ಜಂಟಿಯಾಗಿ ರಸ್ತೆ ಸುರಕ್ಷತಾ ಕಾರ್ಯಕ್ರಮ; ಜಾಗೃತಿ ವಿಡಿಯೋ, ಸ್ಟಿಕರ್ ಬಿಡುಗಡೆ




ರೋಟರಿ ಕ್ಲಬ್ ಕುಂದಾಪುರ ದಕ್ಷಿಣ, ರೋಟರಿ ಕ್ಲಬ್ ಕುಂದಾಪುರ, ರೋಟರಿ ಕ್ಲಬ್ ಕುಂದಾಪುರ ಮಿಡ್‌ಟೌನ್ ಮತ್ತು ರೋಟರಿ ಕ್ಲಬ್ ಕುಂದಾಪುರ ಸನ್‌ರೈಸ್ ಕ್ಲಬ್‌ಗಳು ಜಂಟಿಯಾಗಿ ಆಯೋಜಿಸಿದ್ದ ರಸ್ತೆ ಸುರಕ್ಷತಾ ಕಾರ್ಯಕ್ರಮವು ಇತ್ತೀಚೆಗೆ ನಡೆಯಿತು. ಈ ಸಂದರ್ಭದಲ್ಲಿ, ಸಂಚಾರ ಪೊಲೀಸ್ ಸಬ್–ಇನ್ಸ್‌ಪೆಕ್ಟರ್ ಶ್ರೀ ನೂತನ್ ಅವರು ಎಲ್‌ಇಡಿ ವಿಡಿಯೋ ಮೂಲಕ ರಸ್ತೆ ಸುರಕ್ಷತಾ ಕಾರ್ಯಕ್ರಮವನ್ನು ಅನಾವರಣಗೊಳಿಸಿದರು. ಬಳಿಕ ಮಾತನಾಡಿದ ಅವರು, ಸಂಚಾರ ನಿಯಮಗಳನ್ನು ಪಾಲಿಸುವ, ಸುರಕ್ಷಿತವಾಗಿ ವಾಹನ ಚಲಾಯಿಸುವ ಮತ್ತು ಜೀವಗಳನ್ನು ಉಳಿಸುವ ಮಹತ್ವದ ಕುರಿತು ತಿಳಿಸಿದರು. ಭಾರತೀಯ ರೆಡ್‌ಕ್ರಾಸ್ ಸೊಸೈಟಿ ಕುಂದಾಪುರದ ಅಧ್ಯಕ್ಷರಾದ ರೊ. ಜಯಕರ ಶೆಟ್ಟಿ ಅವರು ರಸ್ತೆ ಸುರಕ್ಷತೆಯ ಕುರಿತಾದ ಸ್ಟಿಕರ್‌ಗಳನ್ನು ಬಿಡುಗಡೆ ಮಾಡಿದರು. ಕಾರ್ಯಕ್ರಮಕ್ಕೆ ಎಲ್ಲರನ್ನು ಸ್ವಾಗತಿಸಿ, ಪ್ರಸ್ತಾವಿಕ ಭಾಷಣ ಮಾಡಿದ ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ಅಧ್ಯಕ್ಷರಾದ ಸಚಿನ್ ನಕ್ಕತ್ತಾಯ, "ರಸ್ತೆ ಸುರಕ್ಷತೆ ಎಂಬುದು ಕೇವಲ ಕಾನೂನು ಪಾಲನೆ ಅಲ್ಲ, ಇದು ನಮ್ಮ ಮತ್ತು ಇತರರ ಜೀವನದ ಬಗ್ಗೆ ಕಾಳಜಿ ವಹಿಸುವುದು," ಎಂದು ಹೇಳಿದರು. ಪ್ರತಿದಿನ ರಸ್ತೆ ಅಪಘಾತಗಳಿಂದ ಅನೇಕ ಜೀವಗಳು ತೊಂದರೆಗೆ ಸಿಲುಕುತ್ತಿವೆ. ಈ ಕಾರ್ಯಕ್ರಮದ ಉದ್ದೇಶವು ಸಮುದಾಯದಲ್ಲಿ ಹೆಚ್ಚಿನ ಜಾಗೃತಿ ಮತ್ತು ಜವಾಬ್ದಾರಿಯನ್ನು ಮೂಡಿಸುವುದಾಗಿದೆ ಎಂದು ತಿಳಿಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ ಅತಿಥಿಗಳನ್ನು ರೋಟರಿ ಕ್ಲಬ್ ಕುಂದಾಪುರ ಮಿಡ್‌ಟೌನ್‌ನ ಅಧ್ಯಕ್ಷರಾದ ರೊ. ಸುನಿಲ್ ಶೆಟ್ಟಿ ಅವರು ಗೌರವಿಸಿದರು. ರೋಟರಿ ಕ್ಲಬ್ ಕುಂದಾಪುರ ಸನ್‌ರೈಸ್‌ನ ಅಧ್ಯಕ್ಷರಾದ ರೊ. ಗುರುರಾಜ್ ಕೋತ್ವಾಲ್ ವಂದನಾರ್ಪಣೆ ಮಾಡಿದರು. ರೋಟರಿ ಕ್ಲಬ್ ಕುಂದಾಪುರದ ಅಧ್ಯಕ್ಷರಾದ ರೊ. ನಾಗರಾಜ್ ಅವರು ಅತಿಥಿಗಳಿಗೆ ಸ್ಮರಣಿಕೆ ನೀಡಿ ಗೌರವಿಸಿದರು. ಈ ಕಾರ್ಯಕ್ರಮವು ರಸ್ತೆ ಸುರಕ್ಷತೆಯ ಪ್ರಾಮುಖ್ಯತೆಯನ್ನು ಎಲ್ಲರಿಗೂ ಮನವರಿಕೆ ಮಾಡಿಕೊಡುವಲ್ಲಿ ಯಶಸ್ವಿಯಾಯಿತು.

## THE ROTARY 4-WAY TEST

1. Is it the truth?
2. Is it fair to all concerned?
3. Will it build goodwill and better friendships?
4. Will it be beneficial to all concerned?

*This Bulletin is sponsored by :*
**Rtn. Doma Chandrashekar**
**Mob. : 9886156156**

For Private Circulation only

Email id – rotaryclub.kundapurasouth@gmail.com


Rtn. S. Sadananda Chatra
1996-97


Rtn. K. Suresh Kamath
1998-99


Rtn. S. Vijaya Shetty
2000-01


Rtn. U. S. Shenoy
2002-03


Rtn. Dr. B. V. Udupa
2004-05


Rtn. K. Shantharam Prabhu
2006-07


Rtn. T. Raghavendra Hatwar
2007-08


Rtn. K. Shankar
2008-09


Rtn. S. Jayakar Shetty
2009-10


Rtn. K. K. Kanchan
2010-11


Rtn. Abhinandan A. Shetty
2011-12


Rtn. Vivian Crasto
2012-13


Rtn. G. Shreedhar Shetty
2013-14


Rtn. K. P. Bhat
2014-15



Rtn. P. Vasudeva Karanth
2015-16


Rtn. Aouzline F. Rebello
2016-17


Rtn. J. Srinath Rao
2017-18


Rtn. Johnson D' Almeida
2018-19


Rtn.Devaraj
2019-20


Rtn. Dr. Uttam Kumar Shetty
2020-21


Rtn.Mahendr Shetty
2021-22


Rtn.Sathyanarayana Puranik
2022-23


Rtn.Suresh Mallya
2023-24


Rtn. Judith Mendonca
2024-25